Regd No B G 155 4-2-1970

SATYAVADI Daily, MYSORE 4 ✱ 53 rd Year of Publication

Golden Jubilee Celebrated Paper

ಸತ್ಯವಾದಿ

ಸ್ವರ್ಣ ಮಹೋತ್ಸವ ಸಂದರ್ಭದಲ್ಲಿ ಪ್ರಕಟವಾಗುತ್ತಿರುವ ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಆಸಿ ಜೀವ ರಕಣೆ ಸರಕಾರದ ಕರ್ತವ – ಪಾಟೀಲ್

ಸರ್ಕಾರವ ದೃಷ್ಟಿಯಲ್ಲಿ ಎಲ್ಲ ಒಂದೇ

ರಾಜ್ಯದ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ವಿಧಾನ ಸಭೆಯಲ್ಲಿ ನಿನ್ನೆ ಮಾತನಾಡುತ್ತಾ, ಸರ್ಕಾರವು ರಾಜ್ಯದಲ್ಲಿನ ಕನ್ನಡಿಗರೇ ಆಗಲೀ, ತಮಿಳರೇ ಆಗಲೀ ಎಲ್ಲ ಪ್ರಜೆಗಳನ್ನು ಒಂದೇ ದೃಷ್ಟಿಯಲ್ಲಿ ನೋಡುವುದೆಂದು, ಎಲ್ಲ ಪ್ರಜೆಗಳ ಜೀವ ಮತ್ತು ಆಸ್ತಿಯನ್ನು ರಕ್ಷಿಸುವುದು ತನ್ನ ಕರ್ತವ್ಯವೆಂದು ತಿಳಿದಿರುವುದೆಂದು ನುಡಿದರು. ರಾಜ್ಯದಲ್ಲಿರುವ ಎರಡೂವರೆ ಕೋಟಿ ಜನರು ಅವರು ಎಲ್ಲಿಂದಲಾದರೂ ಬಂದಿರಲಿ ಯಾವ ಭಾಷೆಯನ್ನೇ ಆಡಲಿ ಅವರು ಮೈಸೂರಿನ ಪ್ರಜೆಗಳು ಎಂದರು.

●★●

ಹೆಸರಿಗೆ ಕಳಂಕ

3 ದಿನಗಳಿಂದ ಬೆಂಗಳೂರಿನಲ್ಲಿ ನಡೆದ ಭಾಷಾವಾರು ಗಲಭೆ ಬಗ್ಗೆ ಶಾಸನ ಸಭೆಯ ಎರಡು ಕಡೆಯವರೂ ತನುಗೆ ಡಂಗು ಬಡಿದಂತೆ ಆಗಿರುವ ಮತ್ತು ಮನ ನೊಂದಿರುವ ಬಗ್ಗೆ ವ್ಯಕ್ತಪಡಿಸಿ ಇದು ರಾಜ್ಯದ ರಾಜಧಾನಿಯ ಒಳ್ಳೆಯ ಹೆಸರಿಗೆ ಕಳಂಕ ತರುವಂಥಹದೆಂದು ಒಪ್ಪಿದರು.

ವಕೀಲರ ದಸ್ತಗಿರಿ

3 ವರ್ಷದ ರಶ್ಮಿಗೆ ಬಂದಿದ್ದ ರೂ. 1 ಲಕ್ಷ ಲಾಟರಿ ಬಹುಮಾನವನ್ನು ಮೋಸಮಾಡಲು ಪ್ರಯತ್ನಿಸಿದ ರಾಜಾಸ್ಥಾನದ ಅಡ್ವೊಕೇಟ್ ಶ್ರೀ ಲಾಲ್ ಚಂದ್ ಬಂಧಿತರಾದರೆಂದು ಜಮ್ಮು ವಾರ್ತೆ.

ಪಾನ ಪ್ರತಿಬಂಧಕ್ಕೆ

ಮದ್ಯಪ್ರತಿಬಂಧ ಪ್ರಚಾರವನ್ನು ರಾಜ್ಯಾದ್ಯಂತ ಕೈಗೊಳ್ಳಲಾಗುವದೆಂದು ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು. ಇದಕ್ಕಾಗಿ ರಾಜ್ಯಮಟ್ಟದಲ್ಲಿ ಒಂದು ಸಮಿತಿ ರಚಿಸಲಾಯಿತೆಂದು ಬೆಂಗಳೂರು ವಾರ್ತೆ.

○

ಕೇಂದ್ರಕ್ಕೆ ಮನವಿ

ಹಾಲಿಗೆ ರಾಷ್ಟ್ರೀಯ ಗ್ರಿಡ್‌ನಲ್ಲಿ ನ್ಯಾಯವನ್ನು ಸೇರಿಸುವಂತೆ ಕೇಂದ್ರಕ್ಕೆ ಮೈಸೂರು ಕೇಂದ್ರಕ್ಕೆ ಬರೆದಿದೆ.

●

ಸೌಕರ್ಯ ವ್ಯವಸ್ಥೆ

ತಿರುಪತಿ–ತಿರುಮಲೈ ದೇವಸ್ಥಾನಗಳ ನುಂದಿನ ಅಂದಾಜಪಟ್ಟಿಯಲ್ಲಿ ಯಾತ್ರಿಕರಿಗೆ ಅನೇಕ ಸೌಕರ್ಯಗಳನ್ನು ಏರ್ಪಡಿಸಲಾಗಿದೆ.

●

ಗಿರಿಯವರ ಕರೆ

ಸ್ವಾಗತ ವಿನ್ನವತ್ತಳೆಗೆ ಸೊಗೂರಿನಲ್ಲಿ ರಾಷ್ಟ್ರಪತಿ ಶ್ರೀ ವಿ. ವಿ. ಗಿರಿಯವರು ಉತ್ತರ ನೀಡುತ್ತಾ, ಇಪ್ಪತ್ತೈರಡು ವರ್ಷಗಳ ಸ್ವಾತಂತ್ರ್ಯಾನಂತರವೂ ಹೆಚ್ಚು ಭಾಗದ ಜನರಿಗೆ ಅವಶ್ಯಕವಾದ ಕನಿಷ್ಠ ಜೀವನದ ಭರವಸೆ ಸಿಕ್ಕಿಲ್ಲವೆಂದು ತಿಳಿಸಿದರು.

ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ, ಬಡತನ ನಿರ್ಮೂಲವಾಗಲಿ, ಶಿಕ್ಷಣ ಪದ್ಧತಿ ಸರಿಯಾಗಲಿ ಎಂದರು.

★

ಬೆಂಗಳೂರಿನಲ್ಲಿ ಚಳುವಳಿಯಿಂದನೊಂದವರ ಬಗ್ಗೆ ರಾಜ್ಯಸರ್ಕಾರ ಪರಿಶೀಲಿಸಲಿದೆ

ವಾಟಳರ ಸಸ್ಪೆಂಡ್

ತಾಳವಾಡಿಯಲ್ಲಿ ಆದುದರ ಕುರಿತು ತಾವು ಹೇಳಿಕೆ ನೀಡುವುದಾಗಿ ವಿಧಾನ ಸಭೆಯಲ್ಲಿ ಶ್ರೀ ವಾಟಾಳ್ ನಾಗರಾಜ್ ತಿಳಿಸಿದಾಗ, ಆ ಬಗ್ಗೆ ನೋಟೀಸು ಕೊಟ್ಟರೆ ಪರ್ಯಾಲೋಚಿಸುವುದಾಗಿ ಸ್ಪೀಕರರು ತಿಳಿಸಿದರು ತಾವು ಹೇಳಿಕೆ ಕೊಡಬೇಕೆಂದು ಅವರು ಒತ್ತಾಯ ಮಾಡಿದರು. ತಮ್ಮ ಆಜ್ಞೆಯನ್ನು ಉಲ್ಲಂಘಿಸಿದ್ದಕ್ಕೆ ಸಭೆಯಿಂದ ಹೊರಗೆ ಹಾಕುವಂತೆ ಸ್ಪೀಕರರು ಆಜ್ಞೆ ಮಾಡಿದರು. ಅದನ್ನು ತಿರಸ್ಕರಿಸಿದ ನಾಗರಾಜರನ್ನು ಅಧಿವೇಶನಪೂರ್ತಿ ಸಸ್ಪೆಂಡ್ ಮಾಡಲಾಯಿತು. ಸಭೆಯು ಹದಿನೈದು ನಿಮಿಷ ಮುಂದುವರಿಯಿತು

○

ಚಳವಳಿ ಯೋಜನೆ

ಮಾಲೂರು— ಈ ತಾಲ್ಲೂಕು ಅನಾವೃಷ್ಟಿ ಪೀಡಿತವಾಗಿರುವದರಿಂದ ಕಂದಾಯ ಮತ್ತು ನೀರಿನ ಛಾರ್ಜು ವಸೂಲಿ ವಿರುದ್ಧ ಚಳವಳಿ ಹೂಡಲು ಅಲ್ಲಿ ರೈತರು ನಿರ್ಧರಿಸಿರುವರು.

★

ದೇಶದಲ್ಲಿ ಪ್ರಜಾಪ್ರಭುತ್ವ ಸಮತಾವಾದಕ್ಕೆ ಒಂದು ಕನಿಷ್ಠ ಕಾರ್ಯಕ್ರಮವಿರುವ ಸಂಯುಕ್ತ ರಂಗ ಸರ್ಕಾರ ಅವಶ್ಯಕವೆಂದು ಕಮ್ಯೂನಿಸ್ಟ್ ಪಾರ್ಟಿ ಅಧ್ಯಕ್ಷ ಶ್ರೀ ಎಸ್ ಎ ಡಾಂಗೆ ವಿಜಯವಾಡಾದಲ್ಲಿ ತಿಳಿಸಿದರು. ಸಿಂಡಿಕೇಟ್ ಸರ್ಕಾರ ಬರುವುದನ್ನು ತಪ್ಪಿಸಲು ಸಾರ್ವಜನಿಕರಿಗೆ ಒಳ್ಳೆಯದಾಗಲು ತನ್ನ ಪಾರ್ಟಿ ಇಂದಿರಾ ಸರ್ಕಾರಕ್ಕೆ ಬೆಂಬಲಿಸುವುದೆಂದರು.

○

ಶ್ರೀಕಾಕುಳಂ ಜಿಲ್ಲೆಯಲ್ಲಿ ನಕ್ಸಲಿಗಳ ಚಳುವಳಿ ಕುಸಿದಿದೆ.

ತಾ. 6–2–70 ನೇ ಶುಕ್ರವಾರದಿಂದ ಪ್ರಾರಂಭ

ದೇವೇಂದ್ರ ಗೋಯಲ್‌ರವರ ಅತ್ಯುತ್ತಮ ಸಾಮಾಜಿಕ ಚಿತ್ರ

ಏಕ್ ಫೂಲ್ ದೋ ಮಾಲಿ

ನಿರ್ದೇಶನ (ಕಲರ್‌ನಲ್ಲಿ) ಸಂಗೀತ
ದೇವೇಂದ್ರ ಗೋಯಲ್ ರವಿ

ಪಾತ್ರ: ಸಂಜಯ್, ಸಾಧನ ಮತ್ತು ಬಲ್‌ರಾಜ್ ಸಹಾನಿ

ಒಲಂಪಿಯಾ ಮತ್ತು ಶ್ರೀ ಚಿತ್ರಮಂದಿರದಲ್ಲಿ

ಪ್ರತಿ ದಿನ 2–30, 6 ಮತ್ತು 9–30 ಕ್ಕೆ — 2–45, 6–30 ಮತ್ತು 10 ಕ್ಕೆ

ಶ್ರೀ ಚಿತ್ರ ಮಂದಿರ

ಹೊಸ ಯಂತ್ರೋಪಕರಣ, ಪ್ಲಾಸ್ಟಿಕ್ ಸಿಲ್ವರ್ ಸ್ಕ್ರೀನ್ ಮತ್ತು ಸುಖಾಸನಗಳಿಂದ ಸಜ್ಜುಗೊಳಿಸಲಾಗಿದೆ

"Bank Road Bahusar – A Fair Price Shop in Actual Practice"

ಲಾಟರಿಗಳ ವಿಷಯದಲ್ಲಿ
ಲೆನಿನ್ನರ ಹೇಳಿಕೆ

[ಸ್ಟೇಟ್ಸ್‌ಮನ್ ಪತ್ರಿಕೆಯ ಶ್ರೀ ಬೆರ್ಡ್ ಹಜಾರಿಕಾರವರ ಲೇಖನಾನುವಾದ]

ಈಗ ಹೆಚ್ಚು ಕಡಮೆ ಎಲ್ಲ ರಾಜ್ಯಗಳೂ ಲಾಟರಿ ನಡೆಸುತ್ತಿವೆ. ಕಮ್ಯೂನಿಸ್ಟ ರು– ಕೇರಳ ಮತ್ತು ಪಶ್ಚಿಮ ಬಂಗಾಳಾ ಸಂಯುಕ್ತ ರಂಗ ಸರಕಾರಗಳ ನೇತೃತ್ವ ದಲ್ಲಿ – ಇದಕ್ಕೆ ಅಕ್ಸೆಪ್ಷನ್ ಇಲ್ಲ.

ಅದಾಗ್ಯೂ, ಜನರು ಹೇಳಿರುವರು— " ನಾನು 50 ರೂಬಲ್‌ಗಳ (ರಷ್ಯಾ ಣ್ಯ) ಬೆಲೆಯ ಹಸುವನ್ನು ಹೊಂದಿರುವೆನೆನ್ನೋಣ ; ಅದನ್ನು ಲಾಟರಿ ಮೂಲಕ ನೂರಲು ಇಚ್ಛಿಸಿ ಒಂದೊಂದು ರೂಬಲ್ ಟಿಕೇಟನ್ನು ಪ್ರತಿಯೊಬ್ಬರಿಗೂ ಕೊಡು ೇನು : ಜನರು ಚಪಲಗೊಂಡು ರೂಬಲುಗಳು ಬಂದು ಬೀಳುವುವು ; ಒಂದು ನೂರು ರೂಬಲು ಶೇಖರಿಸಲ್ಪಟ್ಟ ನಂತರ, ಲಾಟರಿ ನಡೆಸುವೆನು : ಯಾರ ಚೀಟು ಎತ್ತ ಲ್ಪ ಗುವುದೋ ಆತನು 1 ರೂಬಲ್ಲಿಗೆ ಹಸು ಪಡೆಯುವನು : ಇತರರಿಗೆ ಏನೂ ಸಿಕ್ಕುವು ದಿಲ್ಲ : ಹಸುವು ಜನರಿಗೆ ಅಗ್ಗವಾಗಿತ್ತೋ ? ಇಲ್ಲ, ಅದು ಬಹಳ ತಗ್ಗಾಗಿತ್ತು ; ಏಕೆಂದರೆ ಅವರು ಕೊಟ್ಟ ಒಟ್ಟು ಹಣವು ಹಸುವಿನ ಬೆಲೆಯ ಎರಡರಷ್ಟಾಗಿತ್ತು ; ಮತ್ತು ಇಬ್ಬರು (ಲಾಟರಿ ನಡೆಸಿದವನು ಒಬ್ಬ, ಹಸುವನ್ನು ಪಡೆದವನು ಒಬ್ಬ) ಏನೂ ಕೆಲಸ ಮಾಡದೆ ಫಾಯಿದೆ ಪಡೆದರು ; ಮತ್ತು ತಮ್ಮ ಹಣ ಕಳೆದುಕೊಂಡ 99 ಮಂದಿಯ ಖರ್ಚಿನಿಂದ ಈ ಲಾಭ : ಆದ್ದರಿಂದ ಲಾಟರಿಗಳು ಜನತೆಗೆ ಪ್ರಯೋ ಜನವೆಂದು ಹೇಳುವವನು ಜನತೆಗೆ ಮೋಸ ಉಪದೇಶ ಮಾಡುವನು '.

§ ಇದು ಇಷ್ಟು ವಿಶದವಾಗಿ ತಿಳಿಸಲ್ಪಟ್ಟಿದ್ದರೂ, ಲೆನಿನ್ನರು ತಮ್ಮ ದೈವ ವೆನ್ನುವವರು ಕೇರಳ ಮತ್ತು ಪಶ್ಚಿಮ ಬಂಗಾಳಾ ಲಾಟರಿ ನಡೆಸುವುದು ಆಶ್ಚರ್ಯ ಕರವಾಗಿದೆ !

Help The Gorakshana



Protect the Cow

ಗೋರಕ್ಷಣೆ ವಂಶ, ಪ್ರಾಣದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲೀ
ಗೋರಕ್ಷಣಕ್ಕೆ ಬೆಂಬಲ ನೀಡಿ

ಅಖಿಲ ಭಾರತದಲ್ಲಿ ಕೂಡಲೇ
ಗೋವಧೆ ನಿಷೇಧವಾಗಲಿ

Quality Printing — Neat Binding
Lakshminarasimha Press
Sivarampet, Mysore

ಪುಷ್ಪಾಂಡ್ ಅನೋಖ 5 ನೇ ವಾರ
ಶಿನ ಅನೋಖ ಪ್ರಾರಂಭ
.... ತುಂಬಿದ ಚಿತ್ರಮಂದಿರಕ್ಕೆ ಪ್ರದರ್ಶಿತವಾಗುತ್ತಿದೆ ....
ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅನೋಖ ಕನ್ನಡ ಚಿತ್ರ
ಗೆಜ್ಜೆ ಪೂಜೆ
ನಟವರ್ಗ– ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ
[ದಿನ 3 ಪ್ರದರ್ಶನಗಳು]

ಆಪೆರಾ— ಅನೋಖ 2ನೇ ವಾರ
.... ಅತ್ಯಮೋಘ ಕನ್ನಡ ಚಿತ್ರ ....
ಛಲೇ ಕಿಲಾಡಿ
ಪಾತ್ರ : ನರಸಿಂಹರಾಜು ರಂಗ ವೆಂಕಟೇಶ್
ಕಥೆ – ಸಂಭಾಷಣೆ : ಹುಣಸೂರ್ ಕೃಷ್ಣಮೂರ್ತಿ
ದಿಗ್ದರ್ಶನ : ಎ ನಾಗರಾಜ್–
ದಿನ 3 ಆಟಗಳು

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆಯೆಚ್ಚ ಸೇರಿ ವರ್ಷಕ್ಕೆ ರೂ 10–00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಗೋರಕ್ಷಣಕ್ಕೆ ಚಂದಾ ಮತ್ತು ಡೊನೇರ್ಷ ಪಾವತಿಮಾಡುವ ಅಡ್ರೆಸ್

1 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲ್ಕು

2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಟ್ರಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.

3. ಡಾ ॥ ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್,
ಪ್ರಾಣಿಡಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು
ಗೋರಕ್ಷಣ ಆಫೀಸ್, ಸತ್ಯವಾದಿಪ್ರೆಸ್ ಚಾಮರಾಜಪುರಂ, ಮೈಸೂರು 4

SHAKTI
SUDHA
A Superb Tonic

Edited Printed & Published by Dharmaprachara Nirata
M S Krishna Rao (Proprietor) at the Satyavadi Press
Chamarajapuram, Mysore 4